**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಸ್ಪೆಷಲ್ ಕೇಸ್ ಸಂಖ್ಯೆಃ 5028/2023**

**ಪ್ರಾಸಾ ಃ 2**

**ಚಾಸಾ ಃ 2**

ಸಾಕ್ಷಿಯ ಹೆಸರು ಃ ಬೊಳಕ

ತಂದೆಯ ಹೆಸರುಃ ಸಣ್ಣ

ವಯಸ್ಸು ಃ 80 ವರ್ಷ

ವೃತ್ತಿ ಃ ಏನೂ ಇಲ್ಲ

ವಿಳಾಸ ಃ ಮುಗುಟಗೇರಿ ಗ್ರಾಮ

ದಿಃ 26.07.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ಚಾಸಾ 1 ನನ್ನ ಮಗ. ನಾನು ಚಾಸಾ 3 ರವರ ಕಾಫಿ ತೋಟದ ಲೈನ್ ಮನೆಯಲ್ಲಿ ವಾಸವಾಗಿದ್ದೇನೆ. ನಾನು ಪರಿಶಿಷ್ಟ ಪಂಗಡದ ಎರವರ ಜಾತಿಗೆ ಸೇರಿದವನು. ನನಗೆ 3 ಜನ ಮಕ್ಕಳು. ಚಾಸಾ 1 ರವರ ಪತ್ನಿಯ ಹೆಸರು ಮೊಣ್ಣಿ. ಚಾಸಾ 1 ಹಾಗೂ ಆತನ ಪತ್ನಿ ಚಾಸಾ 3 ರವರ ಲೈನ್ ಮನೆಯಲ್ಲಿ ವಾಸವಾಗಿದ್ದರು. ನನಗೆ ಆರೋಪಿ ಶ್ರೀನಿವಾಸನ ಪರಿಚಯ ಇದೆ. ಆತನನ್ನು ನೋಡಿದರೆ ಗುರುತಿಸುತ್ತೇನೆ. ಆತ ಚಾಸಾ 3 ರವರಿಗೆ ಸೇರಿದ ಲೈನ್ ಮನೆಯಲ್ಲಿ ವಾಸವಾಗಿದ್ದ. ಒಂದು ದಿನ ರಾತ್ರಿ 9.00 ಗಂಟೆಯ ಸುಮಾರಿಗೆ ಊಟ ಮಾಡುವಾಗ ಚಾಸಾ 1 ಹಾಗೂ ಆರೋಪಿಗೆ ಜಗಳ ಆಗಿತ್ತು. ಆರೋಪಿ ಮದ್ಯ ಸೇವಿಸಿಕೊಂಡು ಬಂದು ಚಾಸಾ 1 ರವರೊಂದಿಗೆ ಜಗಳವಾಗಿದ್ದು ಆರೋಪಿಯು ಕತ್ತಿ ತೆಗೆದುಕೊಂಡು ಬಂದು ಚಾಸಾ 1 ಮತ್ತು ಮೊಣ್ಣಿ



ರವರಿಗೆ ಹಲ್ಲೆ ಮಾಡಿರುತ್ತಾರೆ. ಮೊಣ್ಣಿಯ ಕುತ್ತಿಗೆಗೆ ಗಾಯ ಆಗಿತ್ತು. ಆಕೆಯನ್ನು ಸಾಹುಕಾರರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸಾಹುಕಾರರ ಮನೆ ಹತ್ತಿರ ಇದ್ದು, ಅವರಿಗೆ ವಿಷಯ ಗೊತ್ತಾಗಿ ಅವರು ಮೊಣ್ಣಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಮೊಣ್ಣಿ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ. ಪೊಲೀಸರು ನಂತರ ಬಂದು ಶ್ರೀನಿವಾಸನನ್ನು ಹಿಡಿದುಕೊಂಡು ಹೋಗಿರುತ್ತಾರೆ. ಪೊಲೀಸರಿಗೆ ಸಾಹು

ಕಾರರು ವಿಷಯ ತಿಳಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

2. ಆರೋಪಿಯು ಮೊದಲಿನಿಂದಲೂ ಪ್ರತಿನಿತ್ಯ ಮದ್ಯಸೇವಿಸಿಕೊಂಡು ಬಂದು ಚಾಸಾ 1 ಹಾಗೂ ಆತನ ಪತ್ನಿಗೆ ಬೈಯುತ್ತಿದ್ದರು ಹಾಗೂ ಗಲಾಟೆ ಮಾಡುತ್ತಿದ್ದರು ಎಂದರೆ ಸರಿ. ದಿಃ 18.05.2023 ರಂದು ರಾತ್ರಿ ಸುಮಾರು 9.30 ಗಂಟೆಗೆ ನಾನು ಚಾಸಾ 1 ಹಾಗೂ ಮೋಣ್ಣಿ ಊಟ ಮಾಡಿದ್ದು ಆಗ ಆರೋಪಿ ಕೂಡ ನಮ್ಮ ಮನೆಗೆ ಬಂದು ಊಟ ಮಾಡಿ ಅವರ ಮನೆಗೆ ಹೋಗಿರುತ್ತಾರೆ ಎಂದರೆ ಸರಿ. ನಂತರ ನಾನು, ಚಾಸಾ 1 ಹಾಗೂ ಮೋಣ್ಣಿ ಮಲಗಿದ್ದ ಸಮಯದಲ್ಲಿ ಆರೋಪಿಯು ಅಲ್ಲಿಗೆ ಬಂದು ಚಾಸಾ 1 ಹಾಗೂ ಮೋಣ್ಣಿಯನ್ನು ಉದ್ದೇಶಿಸಿ ಎರವ ಸೂಳೆಮಕ್ಕಳು ನಿಮ್ಮಿಬ್ಬರನ್ನು ಕೊಲ್ಲದೇ ಬಿಡುವುದಿಲ್ಲ ಎಂದು ಜೋರಾಗಿ ಬೈಯುತ್ತ



ಮನೆಯ ಹತ್ತಿರ ಬಂದಿದ್ದರು ಎಂದರೆ ಸರಿ. ಆಗ ಚಾಸಾ 1 ರವರು ಮನೆಯಿಂದ ಹೊರಗೆ ಹೋಗಿ ಯಾಕೆ ಬೈಯುತ್ತೀಯಾ ಎಂದು ಆರೋಪಿಯನ್ನು ಕೇಳಿದ್ದು ಆಗ ಆರೋಪಿ ಬೈಯುವುದನ್ನು ಮುಂದುವರಿಸಿದರು ಎಂದರೆ ಸರಿ. ಗಲಾಟೆ ಶಬ್ದ ಕೇಳಿ ಮೋಣ್ಣಿ ಕೂಡ ಎದ್ದು ಹೊರಗೆ ಬಂದಿದ್ದರು ಎಂದರೆ ಸರಿ. ಆಗ ಆರೋಪಿ ಎರಡೂ ಕೈಯಲ್ಲಿ ಕತ್ತಿ ಹಿಡಿದುಕೊಂಡು ಬಂದು ಮೊದಲು ಚಾಸಾ 1 ರವರನ್ನು ಕಡಿಯಲು ಬಂದಾಗ ಆತ ತಪ್ಪಿಸಿಕೊಂಡರು ಎಂದರೆ ಸರಿ. ಆಗ ಮೋಣ್ಣಿಯವರು ತಡೆಯಲು ಬಂದಿದ್ದು ಮೊದಲು ನಿನ್ನನ್ನು ಮುಗಿಸಿದರೆ ಎಲ್ಲಾ ಸರಿಯಾಗುತ್ತದೆ ಎಂದು ಹೇಳಿ ಆರೋಪಿ ತನ್ನ ಕೈಯಲ್ಲಿದ್ದ ಕತಿತಯಿಂದ ಆಕೆಯ ಕುತ್ತಿಗೆಗೆ ಕಡಿದಿದ್ದು, ಆಕೆ ಸ್ಥಳದಲ್ಲೇ ಬಿದ್ದು ಹೋದರು ಎಂದರೆ ಸರಿ. ಆರೋಪಿ ಚಾಸಾ 1 ರವರನ್ನು ಅಟ್ಟಿಸಿಕೊಂಡು ಬಂದಿದ್ದು ಆಗ ಚಾಸಾ 1 ರವರು ಮನೆಯ ಒಳಗೆ ಹೋಗಿ ಸೇರಿಕೊಂಡಿದ್ದು, ಆಗ ಆರೋಪಿ ನಮ್ಮ ಮನೆಯ ಮುಂದಿನ ಬಾಗಿಲಿಗೆ ಕತ್ತಿಯಿಂದ ಕಡಿದು ಬಾಗಿಲನ್ನು ತಳ್ಳಿ ಒಳಗೆ ಹೋಗಿ ಬಾತ್ ರೂಮಿನ ಬಾಗಿಲನ್ನು ಕೂಡ ಕಡಿದಿರುತ್ತಾರೆ ಎಂದರೆ ಸರಿ.

ಚಾಸಾ 1 ಸಿಗದೇ ಇದ್ದಾಗ ಆರೋಪಿ ವಾಪಸ್ಸು ಹೋಗಿದ್ದರು ಎಂದರೆ ಸರಿ. ಅಂಬುಲೆನ್ಸ್ ನಲ್ಲಿ ಸಾಹುಕಾರರು ಮೊಣ್ಣಿಯನ್ನು ಗೋಣಿಕೊಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಆಕೆ ಮಾರ್ಗ ಮಧ್ಯದಲ್ಲೇ ಮೃತಪಟ್ಟಿರುತ್ತಾರೆ ಎಂದರೆ ಸರಿ. ಗಲಾಟೆಯಾದಾಗ ರಾತ್ರಿ ಸುಮಾರು 10.15 ಗಂಟೆ ಆಗಿತ್ತು ಎಂದರೆ ಸರಿ.



## ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

3. ನನಗೆ ಸಂಪೂರ್ಣವಾಗಿ ಕಣ್ಣು ಕಾಣಿಸುವುದಿಲ್ಲ ಹಾಗೂ ಸಂಪೂರ್ಣವಾಗಿ ಕಿವಿ ಕೇಳುವುದಿಲ್ಲ ಎಂದರ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಸ್ವಲ್ಪ ಕಣ್ಣು ಕಾಣುತ್ತದೆ ಹಾಗೂ ಸ್ವಲ್ಪ ಸ್ವಲ್ಪ ಕಿವಿ ಕೇಳಿಸುತ್ತದೆ. ನನಗೆ 6 ತಿಂಗಳಿನಿಂದ ಕಣ್ಣಿನ ದೃಷ್ಟಿಗೆ ತೊಂದರೆಯಾಗಿದೆ. ನನ್ನ ಸ್ವಂತ ಜನ ಹೊರತುಪಡಿಸಿ ಅಕ್ಕಪಕ್ಕದಲ್ಲಿ ಬೇರೆ ಯಾರು ವಾಸವಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಶ್ರೀನಿವಾಸನನ್ನು ನೋಡಿಯೇ ಇಲ್ಲ ಎಂದರೆ ಸರಿಯಲ್ಲ. ನಾನು 2 ವರ್ಷಗಳಿಂದ ಕೆಲಸಕ್ಕೆ ಹೋಗುತ್ತಿಲ್ಲ. ನನಗೆ ನಡೆದುಕೊಂಡು ಹೋಗಲು ಹಾಗೂ ಎಲ್ಲಿಯಾದರೂ ಹೋಗಬೇಕಾದರೆ ನನ್ನ ಮಗ ನನ್ನ ಜೊತೆ ಬರಬೇಕಾಗುತ್ತದೆ ಎಂದರೆ ಸರಿ. ನನ್ನ ನಿತ್ಯಕರ್ಮಗಳಿಗೆ ಹಾಗೂ ಊಟೋಪಚಾರಕ್ಕೆ ನನ್ನ ಮಗನ ಸಹಾಯ ಬೇಕು ಎಂದರೆ ಸರಿ. ನನಗೆ ನನ್ನ ಮಗ ಹೇಳಿದ್ದನ್ನು ನಾನು ಹೇಳುತ್ತಿದ್ದೇನೆ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ ಎಂದರೆ ಸರಿ. ನಾನು ಪೊಲೀಸರ ಸಮಕ್ಷಮ ಹೇಳಿಕೆ ನೀಡಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ**.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)